# ಮೈಸೂರು ಚಾಮುಂಡೇಶ್ವರಿ: ಸಾಂಸ್ಕೃತಿಕ ಆಯಾಮ

**ಡಾ. ಎ. ಆರ್. ಮಹೇಂದ್ರ**
ಸಹಾಯಕ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪಂಚನಹಳ್ಳಿ,
ಕಡೂರು (ತಾ), ಚಿಕ್ಕಮಗಳೂರು (ಜಿ).

**Article Link:** https://aksharasurya.com/2023/07/a-r-mahendra-2/

ಕರ್ನಾಟಕ ರಾಜ್ಯದ ಮೈಸೂರು ತನ್ನ ಇತಿಹಾಸದಿಂದ ಪ್ರಸಿದ್ಧವಾಗಿದೆ. ಇಲ್ಲಿನ ಸುಂದರ ಅರಮನೆ, ಚಾಮುಂಡಿ ಬೆಟ್ಟ ಸದಾ ನೋಡುಗರನ್ನು ಆಕರ್ಷಿಸುತ್ತದೆ. ಚಾಮುಂಡೇಶ್ವರಿ ದೇವಿಯು ಶಿಷ್ಟ ರಕ್ಷಣೆಗೆ ಮತ್ತು ದುಷ್ಟ ಶಿಕ್ಷೆಗೆ ಹೆಸರಾಗಿದ್ದಾಳೆ. ಇಲ್ಲಿ ದೇವಿಯ ತಲೆಗೂದಲು ಬಿದ್ದಿವೆ ಎಂಬ ನಂಬಿಕೆ ಇದೆ. ಮಹಿಷಾಸುರನೆಂಬ ರಾಕ್ಷಸನು ಘೋರ ತಪಸ್ಸನ್ನಾಚರಿಸಿ ದೇವತೆಗಳಿಂದಾಗಲೀ, ರಾಕ್ಷಸರಿಂದಾಗಲೀ, ಮನುಷ್ಯರಿಂದಾಗಲೀ ತನಗೆ ಮೃತ್ಯು ಬಾರದಿರಲೆಂದು ದೇವತೆಗಳಿಂದ ವರ ಪಡೆದಿದ್ದನು. ಕೊನೆಗೆ ಇಂದ್ರನನ್ನು ಓಡಿಸಿ ಸ್ವರ್ಗವನ್ನು ಮಹಿಷಾಸುರ ಆಕ್ರಮಿಸಿಕೊಂಡನು. ಇದನ್ನು ಸಹಿಸಲಾಗದ ದೇವತೆಗಳು ವಿಷ್ಣುವಿನ ಹತ್ತಿರ ಹೋಗಿ ವಿಷಯ ತಿಳಿಸಿದರು. ಆವಾಗ ವಿಷ್ಣು ಒಬ್ಬ ಸ್ತ್ರೀ ಶಕ್ತಿಯಿಂದ ಮಾತ್ರ ಅವನ ಅಂತ್ಯ ಎಂದು ಹೇಳಿದನು. ಮುಂದೆ 'ಬ್ರಹ್ಮ, ವಿಷ್ಣು, ಮಹೇಶ್ವರ ತೇಜಸ್ಸುಗಳು ಸೇರಿ ಒಬ್ಬ ಸ್ತ್ರೀ ಉತ್ಪತ್ತಿಯಾದಳು.' ಈ ಸ್ತ್ರೀಯು ಮಹಿಷಾಸುರನನ್ನು ಸಂಹಾರ ಮಾಡಿದಳು. ದೇವಿಯನ್ನು ಸಂಹಾರ ಮಾಡಿದ ಸ್ಥಳದಲ್ಲೇ ನೆಲೆ ನಿಲ್ಲುವಂತೆ ಮಹರ್ಷಿಗಳು ಪ್ರಾರ್ಥಿಸಿದರ ಪರಿಣಾಮ ದೇವಿಯು ಅಲ್ಲೇ ನೆಲೆನಿಂತಳು ಮತ್ತು ಮಹಿಷಸುರನನ್ನು ವಧೆ ಮಾಡಿದ ಸ್ಥಳ ಮೈಸೂರು ಎಂದು ಹೆಸರಾಯಿತು. ದೇವಿಯ ರೂಪವನ್ನು ಚಾಮುಂಡೇಶ್ವರಿ ಎಂದು ಇಂದಿಗೂ ಕರೆಯುತ್ತಾರೆ. ದೇವಿಯು ಕೈಯಲ್ಲಿ ತ್ರಿಶೂಲ ಹಿಡಿದು, ಮಹಿಷನನ್ನು ಕಾಲಲ್ಲಿ ಮೆಟ್ಟಿ, ತನ್ನ ನಾಲಿಗೆ ಹಿರಿದು ನಿಂತ ಭಂಗಿ ಜನಪ್ರಿಯವಾಗಿದೆ.

**ಸ್ಥಳಪುರಾಣ:** ಚಾಮುಂಡೇಶ್ವರಿ ದೇವಾಲಯವು ಮೈಸೂರು ನಗರದ ಚಾಮುಂಡಿ ಬೆಟ್ಟದ ನೆತ್ತಿಯ ಮೇಲೆ ಸ್ಥಾಪಿತವಾಗಿದೆ. ಚಾಮುಂಡಿ ಬೆಟ್ಟದ ಅಡಿಯಲ್ಲಿರುವ ಮೈಸೂರು ನಗರ ಮೈಸೂರು ಮಹಾರಾಜರ ರಾಜಧಾನಿಯಾಗಿತ್ತು. ಮೈಸೂ–ರಿನ ಒಡೆಯರ ಮನೆತನದವರು ತಮ್ಮ ಮೂಲವನ್ನು ಗುಜರಾತಿನ ಯಾದವ ವಂಶದಲ್ಲಿ ಗುರುತಿಸುತ್ತಾರೆ. ನಂಜುಂಡಯ್ಯ ಹಾಗೂ ಅಯ್ಯರ ಬರೆದಿರುವಂತೆ

'ಮೂತ್ರಾ ಎಂಬಲ್ಲಿ ರಾಜ್ಯವಾಳುತ್ತಿದ್ದ ಯಾದವ ವಂಶದ ಭೋಜರಾಯನ ಸಂತತಿಯವನಾದ ಸುರದೇವರಾಯನೆಂಬೊಬ್ಬನು ಕರ್ನಾಟಕ ದೇಶಕ್ಕೆ ಬಂದು, ಚಾಮುಂಡೇಶ್ವರಿ ದೇವಿಯ ಅನುಗ್ರಹದಿಂದ ಮೈಸೂರಿನಲ್ಲಿ ರಾಜ್ಯಸ್ಥಾಪನೆ ಮಾಡಿದ. 'ಪ್ರಸ್ತುತ ರಾಜಕುಮಾರ ಆ ವಂಶಕ್ಕೆ ಸೇರಿದವನು. ಚಾಮುಂಡೇಶ್ವರಿಯು ಮೈಸೂರು ಮಹಾರಾಜರ ರಕ್ಷಾ ದೇವತೆಯಾಗಿದ್ದಾಳೆ.'[1]

ಚಾಮುಂಡೇಶ್ವರಿಯ ಪುರಾಣಕಥೆಯ ಹಿನ್ನೆಲೆ ಹಾಗೂ ಆಕೆ, ಬೆಟ್ಟದ ಮೇಲೆ ವಾಸವಾಗಿದ್ದನೆಂದು ಹೇಳಲಾಗುವ ಮಹಿಷಾಸುರನನ್ನು ಕೊಂದ ಕಥೆಗಳಿಗೆ ಪೌರಾಣಿಕ ಹಿನ್ನೆಲೆಯಿದ್ದು, ಅವು 'ದೇವಿ ಮಹಾತ್ಮೆ' ಪುರಾಣದ ಮುಖ್ಯ ವಸ್ತುವಾಗಿದೆ. ಚಾಮುಂಡೇಶ್ವರಿಗೆ ಸಂಬಂಧಿಸಿದ ಈ ಕಥೆ ಮತ್ತು ಇತರ ಕಥೆಗಳು ಈ ಭಾಗದ ಜನರಲ್ಲಿ ಪ್ರಚಲಿತವಾಗಿವೆ. ಸಾಮಾನ್ಯವಾಗಿ 'ದೇವಿ ಮಹಾತ್ಮೆ'ಯ ಕನ್ನಡ ಅನುವಾದ, ದೇವದೇವತೆಗಳ ಕಥೆಗಳನ್ನು ಹಾಡುತ್ತ ತಿರುಗುವ ದಾಸಯ್ಯಗಳು (ಚಾಮುಂಡೇಶ್ವರಿ ಮತ್ತು ಆಕೆಯ ತಂಗಿ ಉತ್ತನಹಳ್ಳಿಯಮ್ಮ ಇಂಥ ದೇವತೆಗಳಲ್ಲಿ ಇಬ್ಬರು) ಹಳ್ಳಿಗಳಲ್ಲಿ ಶಾಲಾ ಶಿಕ್ಷಕರ ಮಾರ್ಗದರ್ಶನದಲ್ಲಿ ಹಬ್ಬ-ಹುಣ್ಣಿಮೆಗಳ ಕಾಲಕ್ಕೆ ಅಭಿನಯಸಲಾಗುವ ಪೌರಾಣಿಕ ನಾಟಕಗಳು, ಇತರ ಪುರೋಹಿತರ ಮತ್ತು ಕ್ರಿಯಾವಿಧಿ ಪರಿಣಿತರು ಮೊದಲಾದ ಮೂಲಗಳಿಂದ ಜನರು ಈ ಕಥೆಗಳನ್ನು ಕಲಿಯುತ್ತಾರೆ. ಇತ್ತೀಚೆಗೆ 'ಮಹಿಷಾಸುರ ಮರ್ಧಿನಿ' ಎಂಬ ಕನ್ನಡ ಚಲನಚಿತ್ರವು ಚಾಮುಂಡೇಶ್ವರಿಯ ಪ್ರಸಿದ್ಧ ಮಹಿಮೆಗಳನ್ನು ಕನ್ನಡ ಭಾಷಿಕ ಪ್ರದೇಶಗಳಲ್ಲಿ ಜನಪ್ರಿಯಗೊಳಿಸುವಲ್ಲಿ ಸಹಾಯಕವಾಗಿದೆ.

ಹಿಂದಿನ ಕಾಲದಲ್ಲಿ ಚಾಮುಂಡೇಶ್ವರಿ ದೇವಸ್ಥಾನಕ್ಕೆ ಹೋಗುವ ದಾರಿಯು ಅಷ್ಟು ಸುಲಭವಾಗಿರಲಿಲ್ಲ. ಅವಳ ದರ್ಶನ ಪರಿಶ್ರಮದಾಯಕವಾಗಿತ್ತು. ಕ್ರಿ.ಶ. 1664 ರಲ್ಲಿ ದೊಡ್ಡ ದೇವರಾಜ ಒಡೆಯರು ದೇವಸ್ಥಾನಕ್ಕೆ ಹೋಗಲು ಸಾವಿರ ಮೆಟ್ಟಿಲುಗಳ ಮಾರ್ಗ ಕಟ್ಟಿಸಿ ದರ್ಶನ ಸೌಕರ್ಯ ಸುಗಮಗೊಳಿಸಿದರು. ಈಗ ದೇವಸ್ಥಾನವು ನಗರ ಹಾಗೂ ಮೈಸೂರು-ನಂಜನಗೂಡು ಮಾರ್ಗಗಳ ಸಂಪರ್ಕ ಪಡೆದಿದೆ.

ಚಾಮುಂಡೇಶ್ವರಿ ಕ್ಷೇತ್ರದ ನಿಜವಾದ ಅಭಿವೃದ್ಧಿಯು ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಪ್ರಾರಂಭವಾಯಿತು. 1827 ರಲ್ಲಿ ಅವರು ದೇವಸ್ಥಾನ ಜೀರ್ಣೋದ್ಧಾರ ಮಾಡಿಸಿ ಗೋಪುರ ಕಟ್ಟಿಸಿದರು. ಕ್ರಿ.ಶ. 1848 ರಲ್ಲಿ ಅವರು ಉತ್ಸವಕ್ಕಾಗಿ ಸಿಂಹವಾಹನ ಹಾಗೂ ಇತರ ರಥಗಳನ್ನು ದೇವಸ್ಥಾನಕ್ಕೆ ಕಾಣಿಕೆಯಾಗಿ ಕೊಟ್ಟರು. ಅವರು ಕಾಣಿಕೆಯಾಗಿ ಕೊಟ್ಟ ಚಿನ್ನದ ಆಭರಣಗಳಲ್ಲಿ ನಕ್ಷತ್ರ ಮಾಲಿಕೆ ಒಂದಾಗಿದ್ದು ಅದರ ಮೇಲೆ 30 ಸಂಸ್ಕೃತ ಶ್ಲೋಕಗಳನ್ನು ಕೆತ್ತಲಾಗಿರುವುದು ಅದರ

ವೈಶಿಷ್ಟ್ಯವಾಗಿದೆ. ಅದೇ ಕಾಲದಲ್ಲಿ ಬ್ರಾಹ್ಮಣೇತರ ಪೂಜಾರಿಗಳ ಸ್ಥಾನದಲ್ಲಿ ದೀಕ್ಷಿತ ಬ್ರಾಹ್ಮಣರನ್ನು ತರಲಾಯಿತು.

ಚಾಮುಂಡಿ ಬೆಟ್ಟದಲ್ಲಿ ಅಸ್ತಿತ್ವಕ್ಕೆ ಬಂದ ಧಾರ್ಮಿಕ ಅಥವಾ ಲೌಕಿಕ ಕೇಂದ್ರಗಳು ದೇಶೀ ಹಾಗೂ ಮಾರ್ಗ ಸಂಸ್ಕೃತಿಯ ಅಂಶಗಳನ್ನು ಗುರುತಿಸುವಲ್ಲಿ ಸಹಕಾರಿಯಾಗಿವೆ. ಹಲವಾರು ಕಾರಣಗಳಿಗಾಗಿ ಚಾಮುಂಡಿ ಬೆಟ್ಟವು ಅಡಿಯಿಂದ ಮುಡಿಯವರೆಗೆ ಜನಪ್ರಿಯ ಧಾರ್ಮಿಕ ಸ್ಥಳಗಳನ್ನು ಹೊಂದಿದೆ. ಬೆಟ್ಟದಲ್ಲಿ ಧಾರ್ಮಿಕ ಮಠ, ಗುಡಿ, ವೃಕ್ಷ, ಜಕಣಿಗಳು ಇವೆ. ಪುರಾಣ ಹಾಗೂ ಪೌರಾಣಿಕ ಕಥೆಗೆ ಸಂಬಂಧಿಸಿದ ಸ್ಥಳಗಳಿವೆ. ಮಂಟಪ, ಛತ್ರಗಳಿವೆ. ಮಂಟಪಗಳು ಲೌಕಿಕ ಹಾಗೂ ಧಾರ್ಮಿಕ ಕ್ರಿಯಾವಿಧಿ ಸ್ಥಾನಗಳಾಗಿವೆ.

**ಐತಿಹ್ಯಗಳು:** ಮೈಸೂರು 'ಮಹಾಭಾರತ'ದ ಪಾಂಡವರ ಕತೆಯೊಂದಿಗೆ ಸಂಬಂಧ ಹೊಂದಿದೆ. ಚಾಮುಂಡಿ ಬೆಟ್ಟದ ಮೇಲೆ 'ಕುಂತಿಕಲ್ಲು' ಎಂಬ ಬಂಡೆಗಲ್ಲೊಂದಿದೆ. ಪಾಂಡವರ ತಾಯಿ ಕುಂತಿಯು ಮಕ್ಕಳಿಂದ ದೂರವಿದ್ದಾಗ ಆ ಕಲ್ಲಿನ ಮೇಲೆ ಹೆಣ್ಣುಮಕ್ಕಳ ಆಟ ಆಡುತ್ತಿದ್ದಳು ಎಂಬ ಪ್ರತೀತಿ ಇದೆ. ದೇವಸ್ಥಾನದ ಅಧಿಕಾರಿಗಳು ಹಾಗೂ ಎಷ್ಟೋ ಸ್ಥಳೀಯ ಜನರು ಮಾರ್ಕಂಡೇಯ ಪುರಾಣ ಬರೆದ ಮಾರ್ಕಂಡೇಯ ಋಷಿಯು ಚಾಮುಂಡಿಬೆಟ್ಟದ ಮೇಲೆಯೇ ತಪಸ್ಸು ಮಾಡಿದನೆಂದು ಹೇಳುತ್ತಾರೆ.

ಪೌರಾಣಿಕ ಕಥೆಗಳಲ್ಲಿ ಬರುವ ಚಾಮುಂಡೇಶ್ವರಿಯಿಂದ ಸಂಹರಿಸಲ್ಪಟ್ಟ ಮಹಿಷಾಸುರನಿಗೆ ಸಂಬಂಧಿಸಿದ ಅನೇಕ ಸ್ಥಳಗಳು ಇವೆ. ಉದಾಹರಣೆಗೆ: ಕುಂತಿ–ಕಲ್ಲಿನ ಸಮ್ಮುಖದಲ್ಲಿಯೇ ಕೋಣನ ಕೊಟ್ಟಿಗೆ ಎಂಬ ಗವಿ ಇದೆ. ಈ ಗವಿಯಲ್ಲಿ ಮಹಿಷಾಸುರನು ತನ್ನ ಕೋಣವನ್ನು ಕಟ್ಟುತ್ತಿದ್ದನೆಂದು ಹೇಳುತ್ತಾರೆ. ಬೆಟ್ಟದ ಉತ್ತರಕ್ಕೆ ಕಲ್ಲುಬಂಡೆಯ ದಿಣ್ಣೆಯೊಂದಿದೆ. ಅದಕ್ಕೆ ಕೋಣನ ಕೆರೆ ಎಂದು ಹೆಸರು. ಚಾಮುಂಡೇಶ್ವರಿಯು ಮಹಿಷಾಸುರನನ್ನು ಕೊಂದ ಅವಶೇಷವೆಂದು ಭಾವಿಸಲಾಗುವ ಈ ದಿಣ್ಣೆಯ ಮೇಲೆಯೇ ರಾಕ್ಷಸನು ಕೋಣದ ಮೇಲಿದ್ದಾಗಲೇ ಆಕೆಯು ಅವನನ್ನು ಸಂಹರಿಸಿದಳೆಂದು ಹೇಳಲಾಗುತ್ತದೆ. ಬಂಡೆಗಲ್ಲಿನ ಮೇಲಿರುವ ಕೆಲವು ಗುರುತುಗಳು ಕೋಣದ ಹೆಜ್ಜೆಯ ಗುರುತುಗಳೆಂದು ಹೇಳಲಾಗುತ್ತದೆ. ಬಂಡೆಗಲ್ಲಿನ ಮೇಲೆ ವಿಶೇಷವಾಗಿ ತಗ್ಗು ಸ್ಥಳಗಳಲ್ಲಿ ಅಲ್ಲಲ್ಲಿ ಹರಡಿರುವ ಕೆಲವು ಕಲೆಗಳಿದ್ದು ಅವುಗಳನ್ನು ರಾಕ್ಷಸನ ರಕ್ತದ ಕಲೆಗಳೆಂದು ಹೇಳುತ್ತಾರೆ. 'ಇವೆಲ್ಲವುಗಳಿಂದ ಹಾಗೂ ಮಹಾಭಾರತ, ಪುರಾಣಗಳ ಸಂಬಂಧಗಳಿಂದ ಚಾಮುಂಡಿ ಬೆಟ್ಟವನ್ನು ಸ್ಥಳೀಯ ಜನರು ಅಖಿಲ ಭಾರತ ಮಟ್ಟದ ಪವಿತ್ರ ಸ್ಥಳಗಳಲ್ಲಿ ಒಂದೆಂದು ಮನ್ನಿಸುತ್ತಾರೆ.'[2]

ಸುಮಾರು ಇನ್ನೂರು ವರ್ಷಗಳ ಹಿಂದೆ ಬೆಟ್ಟದ ಮೇಲಿನ ದೇವಸ್ಥಾನ ಹಾಗೂ ಇತರ ಪವಿತ್ರ ಕ್ಷೇತ್ರಗಳು ಸಾಮಾನ್ಯ ಜನರಿಗೆ ದುರ್ಗಮವಾಗಿದ್ದವು. ಮೈಸೂರಿನ ಸುಲ್ತಾನ ಟಿಪ್ಪುವಿನ ಮರಣ ಮತ್ತು ಬ್ರಿಟಿಷರ ಮಧ್ಯಪ್ರವೇಶದಿಂದಾಗಿ ಮೈಸೂರು ದೇಶದಲ್ಲಿ ಉತ್ತಮ ರಾಜಕೀಯ ಪರಿಸ್ಥಿತಿ ತಲೆದೋರಿದಾಗ 3ನೆ ಕೃಷ್ಣರಾಜ ಒಡೆಯರು ಸಿಂಹಾಸನ ಏರಿದರು. ಅವರು ತಮ್ಮ ಆಳ್ವಿಕೆಯಲ್ಲಿ ದೇವಸ್ಥಾನಕ್ಕೆ ದತ್ತಿಯನ್ನು ಹಾಕಿಕೊಟ್ಟು ಭವ್ಯ ಗೋಪುರವನ್ನು ಕಟ್ಟಿಸಿ ದೇವಸ್ಥಾನವನ್ನು ನವೀಕರಿಸಿದರು.

**ದೇವಸ್ಥಾನದ ಸೇವಕ ವರ್ಗ:** ಬೆಟ್ಟದಲ್ಲಿಯ ದೇವಸ್ಥಾನದ ಕ್ರಿಯಾವಿಧಿಗಳನ್ನು ನೆರವೇರಿಸಲು ದೊಡ್ಡ ಸಂಖ್ಯೆಯ ಸಿಬ್ಬಂದಿಯಿದ್ದು, ಅವರು ಬೇರೆ ಬೇರೆ ಕಾರ್ಯಗಳನ್ನು ನೆರವೇರಿಸುತ್ತಾರೆ. ಚಾಮುಂಡೇಶ್ವರಿ ದೇವಸ್ಥಾನಕ್ಕೆ ಸಂಬಂಧಿಸಿದ ಕ್ರಿಯಾವಿಧಿ ಪರಿಣಿತರಲ್ಲಿ ಎರಡು ವರ್ಗದವರಿದ್ದಾರೆ. ಬ್ರಾಹ್ಮಣ ಮತ್ತು ಬ್ರಾಹ್ಮಣೇತರ. ಬ್ರಾಹ್ಮಣ ಪುರೋಹಿತರು ತಮ್ಮ ಪವಿತ್ರ ಕ್ರಿಯಾವಿಧಿಗಳಿಂದ ಮಾರ್ಗ ಸಂಸ್ಕೃತಿಯ ವಾಹಕರಾಗಿದ್ದಾರೆ. ಬ್ರಾಹ್ಮಣೇತರ ಕ್ರಿಯಾವಿಧಿ ಪರಿಣಿತರಾದ ಶಿವಾರ್ಚಕರು ತಮ್ಮ ಕ್ರಿಯಾವಿಧಿಗಳಲ್ಲಿ ದೇಶಿ ಸಂಸ್ಕೃತಿಯ ಅಂಶಗಳನ್ನು ಮೈಗೂಡಿಸಿಕೊಂಡಿದ್ದಾರೆ. ದೇವತೆಯ ಮೊದಲಿನ ಪೂಜಾರಿಗಳೆಂದು ಪರಿಗಣಿತರಾಗಿರುವದರಿಂದ ಮೊದಲು ಬ್ರಾಹ್ಮಣೇತರ ಪೂಜಾರಿಗಳನ್ನೂ, ನಂತರ ಅವರ ಸ್ಥಾನಕ್ಕೆ ಬಂದ ಬ್ರಾಹ್ಮಣ ಪುರೋಹಿತರನ್ನು ಕುರಿತು ಚರ್ಚಿಸೋಣ.

**ಬ್ರಾಹ್ಮಣೇತರ ಕ್ರಿಯಾವಿಧಿ ಪರಿಣಿತರು:** ಶಿವಾರ್ಚಕರೆಂದು ಹೇಳಿಕೊಳ್ಳುವ ಬ್ರಾಹ್ಮಣೇತರ ಜಾತಿಯವರು ಸಾಂಪ್ರದಾಯಿಕವಾಗಿ ಶಿವದೇವಾಲಯಗಳ ಪೂಜಾರಿಗಳಾಗಿದ್ದಾರೆ. ಶಿವಾರ್ಚಕರು ತಮ್ಮಲ್ಲೇ ಒಳಬಾಂಧವ್ಯ ಹೊಂದಿದ ಒಂದು ಪ್ರತ್ಯೇಕ ಗುಂಪು. ಅವರಿಗೆ ಬ್ರಾಹ್ಮಣರೊಂದಿಗೆ ಸಹಪಂಕ್ತಿ ಭೋಜನ ಬಳಕೆ ಇಲ್ಲವಾದರೂ ಲಿಂಗಾಯತ ಮತದವರೊಂದಿಗೆ ಇಂಥ ಸಂಬಂಧ ಇಟ್ಟುಕೊಳ್ಳಲು ಯಾವುದೇ ನಿಷೇಧವಿಲ್ಲ. ಶಿವಾರ್ಚಕರು ಶಾಖಾಹಾರಿಗಳು. ಲಿಂಗವನ್ನು ಧರಿಸುವುದರ ಜೊತೆಗೆ ಜನಿವಾರವನ್ನೂ ಧರಿಸುತ್ತಾರೆ.

**ಕಣ್ಣಕನ್ನಡಿ ಉತ್ಸವ:** ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಆಗಮಿಕ ಕ್ರಿಯಾವಿಧಿಗಳು ಬರುವ ಮೊದಲು ಕಣ್ಣಕನ್ನಡಿ ಉತ್ಸವವೊಂದೇ ಪ್ರಮುಖವಾದ ಆಚರಣೆಯಾಗಿ–ತ್ತೆಂದು ಹೇಳಲಾಗುತ್ತದೆ. ಇದಕ್ಕೆ 'ಬೋನುಗುಡಿಕೆ ಹಬ್ಬ'ವೆಂದೂ ಹೆಸರು. ಭಾದ್ರಪದ ಮಾಸದ ಹುಣ್ಣಿಮೆಯ ನಂತರದ ಮೊದಲನೆ ಮಂಗಳವಾರ ಈ ಹಬ್ಬ ನಡೆಯುತ್ತದೆ. ಕಣ್ಣಕನ್ನಡಿಯ ಆಚರಣೆಯು ಭಕ್ತರಿಗೆ ಉತ್ತನಹಳ್ಳಿಯಮ್ಮನನ್ನು ಸಾಂಕೇತಿಕ

ರೂಪದಲ್ಲಿ ಪ್ರದರ್ಶಿಸುವುದೆಂದು ಕಾಣುತ್ತದೆ. ದೇವಾಲಯದಲ್ಲಿ ಉತ್ಸವಮೂರ್ತಿ ಇಲ್ಲದ್ದರಿಂದ ಕಣ್ಣಕನ್ನಡಿಯನ್ನು ಆ ದೇವಾಲಯದ ಲಿಂಗಾಯತ ಪೂಜಾರಿಯೇ ಬೆಟ್ಟದ ಶಿವಾರ್ಚಕ ಪೂಜಾರಿಗಳು ಚಾಮುಂಡೇಶ್ವರಿಯ ಕಣ್ಣಕನ್ನಡಿ ಉತ್ಸವದಲ್ಲಿ ಉಪಯೋಗಿಸುತ್ತಾರೆ. ಒಂದೇ ವ್ಯತ್ಯಾಸವೆಂದರೆ ಕಣ್ಣಕನ್ನಡಿಯನ್ನು ನಿರ್ಮಿಸಿ ಪೂಜಾರಿಯ ಮನೆಯಲ್ಲಿಯೇ ಪ್ರತಿಷ್ಠಾಪಿಸಿ ಅಲ್ಲಿಯೇ ಪೂಜೆ ನೆರವೇರಿಸುತ್ತಾರೆ. ಅವುಗಳನ್ನು ಪೂಜಾರಿಯು ನಿವೇದಿಸಿ ಭಕ್ತರಿಗೆ ಪ್ರಸಾದವೆಂದು ಹಿಂದಿರುಗಿಸುತ್ತಾನೆ. ಪೂಜೆಯ ಸಮಯಕ್ಕೆ ನಾವು ನಿರೀಕ್ಷಿಸಿದಂತೆ ಅವನು ಯಾವುದೇ ಸಂಸ್ಕೃತ ಮಂತ್ರವನ್ನಾಗಲಿ, ಸ್ತೋತ್ರಗಳನ್ನಾಗಲೀ ಪಠಿಸುವುದಿಲ್ಲ. ಒಟ್ಟಿನಲ್ಲಿ ಗ್ರಾಮ್ಯ ಪದ್ಧತಿಯ ಮೌನರೂಪದ ಪೂಜೆಯಾಗಿದೆ.

ಕಣ್ಣಕನ್ನಡಿ ಪೂಜೆಯಾದ ನಂತರ ಗ್ರಾಮದಲ್ಲಿ ಅದರ ಮೆರವಣಿಗೆ ತೆಗೆಯುತ್ತಾರೆ. ಋತುಮತಿಯಾಗದ, ಅವಿವಾಹಿತ ಹುಡುಗಿಯರು ಕಣ್ಣಕನ್ನಡಿಯನ್ನು ಕೊಂಡೊಯ್ಯುತ್ತಾರೆ. ದೇವಾಲಯಕ್ಕೆ ಸಂಬಂಧಿಸಿದ ಅಗಸನು ಹಾಸಿಗೆ ನಾಡಮಡಿ (ಹಡದಿ) ಬಟ್ಟೆಯ ಮೇಲೆ ಕಣ್ಣಕನ್ನಡಿಯನ್ನು ಹೊತ್ತುಕೊಂಡು ಹುಡುಗಿಯರು ನಡೆಯುತ್ತಾರೆ. ಮೈಸೂರು ಮಹಾರಾಜರ ಅರಮನೆಯ ಅಧಿಕಾರಿಗಳು ಚಾಮುಂಡೇಶ್ವರಿಯ ಸಹೋದರಿಗೆ ಗೌರವ ತೋರಲು ಡೈನಮೊ, ಗ್ಯಾಸುಗಳು, ಬ್ಯಾಂಡ್‌ಸೆಟ್ ಹಾಗೂ ಗೌರವಸೂಚಕ ಪತಾಕೆ ಮುಂತಾದವುಗಳನ್ನು ಕಳಿಸುತ್ತಾರೆ. ಈ ಕ್ರಿಯಾವಿಧಿಯ ಆಚರಣೆಯು ರಾತ್ರಿ ಸುಮಾರು ಹತ್ತು ಗಂಟೆಗೆ ಪ್ರಾರಂಭವಾಗಿ ಬೆಳಗಿನ ಜಾವ ಮುಕ್ತಾಯವಾಗುವುದು.

**ಬಾಯಿ ಬೀಗದ ಹಬ್ಬ:** ಕಣ್ಣಕನ್ನಡಿ ಆಚರಣೆಯ ಮರುದಿನ ಬೆಳಿಗ್ಗೆ ಉತ್ತನಹಳ್ಳಿಯಮ್ಮನ ದೇವಾಲಯದ ಪ್ರಾಕಾರದಲ್ಲೇ ಬಾಯಿಬೀಗದ ಹಬ್ಬದ ಆಚರಣೆ ನಡೆಯುತ್ತದೆ. ಬಾಯಿ ಬೀಗದ ಹಬ್ಬವೆಂದರೆ ಬಾಯಿಗೆ ಬೀಗ ಹಾಕುವುದು ಮತ್ತು ತೆಗೆಯುವುದು. ಬಾಯಿಗೆ ಬೀಗ ಹಾಕುವ ಕ್ರಿಯಾವಿಧಿ ಪೂರೈಸಲು ಹರಕೆ ಹೊತ್ತ ಭಕ್ತರು ನಸುಕಿನಲ್ಲಿಯೇ ಸ್ನಾನ ಮಾಡಿ ದೇವಾಲಯದಲ್ಲಿದ್ದ ಲಿಂಗಾಯತ ಪೂಜಾ–ರಿಯಲ್ಲಿಗೆ ಬರುತ್ತಾರೆ. ಬೆಳ್ಳಿಯ ತಂತಿಯಿಂದ ಚಚ್ಚೌಕ ಬೀಗ ಮಾಡಲಾಗಿರುತ್ತದೆ. ಇದರ ಒಂದು ತುದಿ ತೆಳ್ಳಗಿದ್ದು ಚೂಪಾಗಿರುತ್ತದೆ. ಇನ್ನೊಂದು ತುದಿಯು ಕೊಂಡಿಯಂತಿದ್ದು ಬಾಗಿರುತ್ತದೆ. ಈ ಕ್ರಿಯಾವಿಧಿಯನ್ನು ಪೂಜಾರಿಯು ಚೂಪಾದ ತುದಿಯಿಂದ ಭಕ್ತರ ಗಲ್ಲಕ್ಕೆ ಚುಚ್ಚಿ ಕೊಂಡಿಯಿದ್ದ ಇನ್ನೊಂದು ತುದಿಯಿಂದ ಬೀಗ ಹಾಕುತ್ತಾನೆ. ದೇವತೆಯ ಪೂಜೆ ಮುಗಿದ ನಂತರ ಪೂಜಾರಿಯು ಕೊಂಡಿಯನ್ನು ಕಳಚುವುದರಿಂದ ಬಾಯಿಬೀಗ ತೆಗೆಯುತ್ತಾನೆ.

**ಬ್ರಾಹ್ಮಣ ಕ್ರಿಯಾವಿಧಿ ಪರಿಣಿತರು:** ಈಗಾಗಲೇ ಹೇಳಿರುವಂತೆ ಬ್ರಾಹ್ಮಣರು ಶಿವಾರ್ಚಕ ಕ್ರಿಯಾವಿಧಿ ಪರಿಣಿತರನ್ನು ಸ್ಥಾನಪಲ್ಲಟಗೊಳಿಸಿದೊಡನೆ ದೇವಸ್ಥಾನದಲ್ಲಿ ಆಗಮ ವಿಧಿ–ಸಂಪ್ರದಾಯಗಳನ್ನು ಪರಿಚಯಿಸಲಾಯಿತು. ತಮಿಳು ಮಾತನಾಡುವ ಸ್ಮಾರ್ತ ಬ್ರಾಹ್ಮಣರು ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಆಗಮ ಸಂಪ್ರದಾಯಗಳ ವಾಹಕರಾಗಿದ್ದಾರೆ. ಅವರನ್ನು 'ಆಗಮಿಕ'ರೆಂದು ಕರೆಯಲಾಗುತ್ತದೆ. ದೇವಸ್ಥಾನದಲ್ಲಿ ಆಗಮ ವಿಧಾನದ ಪವಿತ್ರ ಕ್ರಿಯಾಚರಣೆಗಳ ಪೂರೈಕೆಗೆ ಹಲವು ಬ್ರಾಹ್ಮಣ ಪರಿಣಿತ–ರಿದ್ದಾರೆ. ದೇವಿಯ ಸಹಸ್ರನಾಮ ಪಠಿಕರು, ವೇದಸ್ತೋತ್ರ ಪಠಿಕರು, ಸ್ತೋತ್ರಪಥ ಉತ್ಸವ ಮೂರ್ತಿಗಳನ್ನು ಒಯ್ಯುವುದು ಹಾಗೂ ವಿಧಿಬದ್ಧವಾಗಿ ಅಡಿಗೆ ಮಾಡುವ ಸೇವಕರು. ಮಹಾಬಲೇಶ್ವರ ಹಾಗೂ ನಾರಾಯಣಸ್ವಾಮಿ ದೇವಾಲಯಗಳ ಬ್ರಾಹ್ಮಣ ಸಿಬ್ಬಂದಿ, ಹೀಗೆ ಒಟ್ಟು 28 ಬ್ರಾಹ್ಮಣ ಪರಿಣಿತರು 60 ಹುದ್ದೆಗಳಲ್ಲಿ ಇದ್ದಾರೆ.

**ಸೇವೆಗಳು:** ಕ್ರಿಯಾವಿಧಿಗಳೆಂದರೆ ಕುಂಕುಮ ಪೂಜೆ, ಬಿಲ್ವಪೂಜೆ ಹಾಗೂ ಏಕಾವರ ಹಾಗೂ ಏಕಾದಶವರ ರುದ್ರಾಭಿಷೇಕ. ಏಕಾದಶವರವೆಂದರೆ ದೇವತೆಗೆ ಹನ್ನೊಂದು ಸಲ ಅಭಿಷೇಕ ಮಾಡುವುದು, ಏಕಾವರವೆಂದರೆ ಒಂದೇ ಸಲ ಅಭಿಷೇಕ ಮಾಡುವುದು, ಕುಂಕುಮ ಹಾಗೂ ಬಿಲ್ವಗಳಿಂದ ಸಹಸ್ರನಾಮ, ತ್ರಿಸತಿ ಹಾಗೂ ಅಷ್ಟೋತ್ತರ ಎಂಬ ಇತರ ಸೇವೆಗಳು ಇವೆ. ಸಹಸ್ರ ನಾಮದಲ್ಲಿ ಒಂದು ಸಾವಿರ ಸಲ, ತ್ರಿಶತಿಯಲ್ಲಿ ಮೂರು ನೂರು ಸಲ, ಅಷ್ಟೋತ್ತರ ಶೈಲಿಯಲ್ಲಿ ಒಂದನೂರು ಎಂಟು ಸಲ ದೇವತೆ ಹೆಸರನ್ನು ಪಠಿಸುವುದು. 'ವಾಹನ ಹಾಗೂ ಕೈತುಲೋತ್ಸವ' ಸೇವೆಗಳೂ ಇವೆ. ವಾಹನೋತ್ಸವದಲ್ಲಿ ಉತ್ಸವ ಮೂರ್ತಿಯನ್ನು ಸಿಂಹ, ಕುದುರೆ, ಆನೆ ಮುಂತಾದ ವಾಹನಗಳ ಮೇಲೆ ಇರಿಸಿ ದೇವಸ್ಥಾನದ ಪ್ರದಕ್ಷಿಣೆಗೆ ಕೊಂಡೊಯ್ಯಲಾಗುವುದು. ಕೈತುಲೋತ್ಸವದಲ್ಲಿ ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿಟ್ಟು, ಶ್ರೀಪಾದ ಸಿಬ್ಬಂದಿಯವರು ದೇವಸ್ಥಾನದ ಪ್ರದಕ್ಷಿಣೆ ಕೊಂಡೊಯ್ಯುತ್ತಾರೆ. ಏಕಾದಶವರ, ಏಕಾವರ, ವಾಹನ ಹಾಗೂ ಕೈತುಲೋತ್ಸವ ಮುಂತಾದ ಸೇವೆ ಸಂದರ್ಭಗಳಲ್ಲಿ ವಿಶೇಷವಾದ ಅಡುಗೆಗಳನ್ನು ದೇವತೆಗೆ ನಿವೇದಿಸುತ್ತಾರೆ. ಪ್ರಸಾದದ ಜೊತೆಗೆ ಸೇವೆ ಸಲ್ಲಿಸಿದ ಭಕ್ತರಿಗೆ ನಿವೇದಿಸಲು ಮಾಡಿದ ಅಡಿಗೆಯನ್ನು ಕೊಡುತ್ತಾರೆ. ಆದರೆ ಭಕ್ತರು ಮೈಸೂರು ನಗರದ ಹೊರಗಡೆ ಇದ್ದರೆ ಕೇವಲ ಕುಂಕುಮ ಪ್ರಸಾದವನ್ನು ಅವರ ವಿಳಾಸಕ್ಕೆ ಅಂಚೆಯ ಮೂಲಕ ಕಳಿಸಲಾಗುತ್ತದೆ. ಸೇವೆಯ ಲಾಭ ಪಡೆಯುವವರ ದಾಖಲೆಗಳನ್ನು ಅವಲೋಕಿಸಿದಾಗ ದಿನದಿನಕ್ಕೆ ವರ್ಷವರ್ಷಕ್ಕೆ ಸೇವೆ ಸಲ್ಲಿಸುವವರ ಸಂಖ್ಯೆ ಹೆಚ್ಚುತ್ತಿದ್ದುದು ಕಂಡುಬರುತ್ತದೆ.

ಸೇವೆಗಳಲ್ಲಿ ಅತಿ ಹೆಚ್ಚು ಪ್ರಮುಖವಾದದ್ದು ಕೋಟಿ ಸಹಸ್ರನಾಮಾರ್ಚನೆ.

ಕೋಟಿ ಸಹಸ್ರನಾಮಾರ್ಚನೆ ನೆರವೇರಿಸಲು ಎಷ್ಟೋ ತಿಂಗಳುಗಳು ಹಿಡಿಯುತ್ತವೆ. ಇದೊಂದು ಹೆಚ್ಚು ವೆಚ್ಚದಾಯಕ ಸೇವೆಯಾಗಿದ್ದು ಪೂಜೆಯ ಸಾಮಗ್ರಿಗಳಿಗೆ, ನೈವೇದ್ಯಕ್ಕೆ ಬ್ರಾಹ್ಮಣ ಕ್ರಿಯಾವಿಧಿ ಪರಿಣತರಿಗೆ ದಕ್ಷಿಣೆ ಕೊಡುವುದಕ್ಕೆ ಹೆಚ್ಚಿನ ಹಣ ಬೇಕಾಗುತ್ತದೆ.

**ದೇವಸ್ಥಾನಕ್ಕೆ ಸಂಬಂಧಿಸಿದ ಕೆಲವು ಬ್ರಾಹ್ಮಣೇತರ ಸಂಪ್ರದಾಯಗಳು:** ಚಾಮುಂಡೇಶ್ವರಿ ದೇವಿಯನ್ನು ಪ್ರಸನ್ನಗೊಳಿಸುವುದಕ್ಕಾಗಿ ಆಗಮಿಕ ಕ್ರಿಯಾವಿಧಿ ಸಂಪ್ರದಾಯಗಳ ಅಂಗವಾದ ರಥೋತ್ಸವ ಹಾಗೂ ತೆಪ್ಪೋತ್ಸವಗಳನ್ನು ಆಚರಿಸಲಾಗುತ್ತದೆ.

**ಧೂಪ ಸುಡುವುದು:** ವಾರ್ಷಿಕ ಹಬ್ಬಗಳ ಸಮಯದಲ್ಲಿ ಕೆಲವು ಪರಿಣತರು ಧೂಪ ಸುಡುವವರಾಗಿ ಕಾರ್ಯ ನಿರ್ವಹಿಸುವುದು ಕಂಡುಬರುತ್ತದೆ. ಉಪ್ಪಲಿಗ (ಉಪ್ಪು ಮಾಡುವವರು) ಹಾಗೂ ರಾಜಪರಿವಾರದ ಜಾತಿಯವರು ಮಣ್ಣಿನ ಜ್ವಾಲಕಗಳಲ್ಲಿ ಮತ್ತು ಭಕ್ತರು ದೇವತೆಯ ಹೆಸರಿನಲ್ಲಿ ಸಾಂಬ್ರಾಣಿಯನ್ನು ಸುಡುತ್ತಾರೆ. ಸಿಬ್ಬಂದಿಯೇ ಭಕ್ತರಿಗೆ ಧೂಪವನ್ನು ಪೂರೈಸುತ್ತಾರೆ. ಹೆಚ್ಚಾಗಿ ಬ್ರಾಹ್ಮಣೇತರರು ಈ ಕ್ರಿಯಾವಿಧಿ ಆಚರಿಸುತ್ತಾರೆಂಬುದು ತಿಳಿದುಬರುತ್ತದೆ. ಈ ಕ್ರಿಯಾವಿಧಿಯು ಬ್ರಾಹ್ಮಣೇತರ ಸಂಪ್ರದಾಯವಾಗಿದ್ದು ದೇಶೀ ಸಂಸ್ಕೃತಿಯ ಲಕ್ಷಣವಾಗಿದೆ.

**ಪ್ರಭಾವಿತ ಪ್ರದೇಶದಲ್ಲಿ ಚಾಮುಂಡೇಶ್ವರಿ ದೇವತೆಯ ಉಪಾಸನೆ:** ಹೆಚ್ಚು ಸಮೀಪದ ಒಳನಾಡಿನಲ್ಲಿ ಚಾಮುಂಡೇಶ್ವರಿ ಪೂಜೆಯ ಸ್ವರೂಪ ಹಾಗೂ ಸಾಂಸ್ಕೃತಿಕ ಸಂಪ್ರದಾಯಗಳ ಹರವು ತಿಳಿಯುವ ಉದ್ದೇಶದಿಂದ ಬೆಟ್ಟದ ಸುತ್ತಲಿನ ಇಪ್ಪತ್ತು ಗ್ರಾಮಗಳ ಸಮೀಕ್ಷೆಯನ್ನು ಕೈಗೊಂಡಾಗ ದೇವಸ್ಥಾನದ ಉತ್ತರ ಹಾಗೂ ವಾಯುವ್ಯ ದಿಕ್ಕಿನಲ್ಲಿರುವ ಆರು ಗ್ರಾಮಗಳಲ್ಲಿ ಒಕ್ಕಲಿಗರು ಬಹುಸಂಖ್ಯೆಯಲ್ಲಿದ್ದಾರೆ, ಆಗ್ನೇಯ ಹಾಗೂ ಈಶಾನ್ಯ ದಿಕ್ಕಿನಲ್ಲಿರುವ ಐದು ಗ್ರಾಮಗಳಲ್ಲಿ ಲಿಂಗಾಯತರು ಬಹುಸಂಖ್ಯಾತರಿದ್ದಾರೆ, ಉತ್ತರ ದಿಕ್ಕಿಗಿರುವ ಒಂದು ಗ್ರಾಮದಲ್ಲಿ ರಾಜಪರಿವಾರದವರು ಬಹುಸಂಖ್ಯೆಯಲ್ಲಿದ್ದಾರೆ.

**ಚಾಮುಂಡೇಶ್ವರಿ ಹಬ್ಬ:** ಗ್ರಾಮದ ಜನರು ಪಾಲ್ಗೊಳ್ಳುವ ಚಾಮುಂಡೇಶ್ವರಿ ಹಬ್ಬವು ನಡೆಯುವ ಅನೇಕ ಗ್ರಾಮಗಳಲ್ಲಿ ಕ್ರಿಯಾವಿಧಿ ವ್ಯತ್ಯಾಸವಿದೆ ಎಂಬುದನ್ನು ನಿರ್ಣಯಿಸಿ ಹಬ್ಬದ ಸಮಯ ಹಾಗೂ ದಿನವನ್ನು ಗೊತ್ತುಪಡಿಸುತ್ತಾರೆ. ಇದನ್ನು ಗ್ರಾಮದ ಸೇವಕರು ತಮಟೆ ಹೊಡೆಯುವುದರ ಮೂಲಕ ಗ್ರಾಮದ ಜನರಿಗೆ ನಿರ್ಣಯವನ್ನು ತಿಳಿಸುತ್ತಾರೆ. ಪ್ರತಿಯೊಂದು ಮನೆತನದಿಂದ ದೇಣಿಗೆಯನ್ನು ಸಂಗ್ರಹಿಸುತ್ತಾರೆ. ಇಂತಹ ದೇಣಿಗೆಗಳು ಸ್ವಯಂ ಪ್ರೇರಿತವಾದವು. ಸಾಮಾನ್ಯವಾಗಿ

ಹಬ್ಬವನ್ನು ಮಂಗಳವಾರ ಇಲ್ಲವೆ ಶುಕ್ರವಾರ ಆಚರಿಸುತ್ತಾರೆ. ಊರ ಹೊರಗೆ ಜಲಾಶಯ ಬಳಿ ಮಂಟಪವನ್ನು ನಿರ್ಮಿಸುತ್ತಾರೆ. ಪ್ರಬಲ ಜಾತಿಯವನೊಬ್ಬ ಇಂತಹ ಸಂದರ್ಭಗಳಲ್ಲಿ ಪೌರೋಹಿತ್ಯ ವಹಿಸುವುದನ್ನು ಗಮನಿಸಬಹುದು. ಮಂಟಪದಲ್ಲಿ ಒಂದು ಕಲಶವನ್ನು (ಬೆಲ್ಲ ಮತ್ತು ಹಿಟ್ಟಿನಿಂದ ಮಾಡಿದ) ದೇವತೆಗೆ ಅರ್ಪಿಸುತ್ತಾರೆ. ಪೌರೋಹಿತ್ಯ ವಹಿಸಿದ ಪೂಜಾರಿಯು ಇವುಗಳನ್ನು ನಿವೇದಿಸಿ, ಭಕ್ತರಿಗೆ ಪ್ರಸಾದವೆಂದು ಹಿಂತಿರುಗಿಸುತ್ತಾನೆ. ಗ್ರಾಮ ಸಮುದಾಯದ ವೆಚ್ಚದಲ್ಲಿ ಕಲಶ ದೇವತೆಯ ಎದುರಿಗೆ ಬಲಿ ಕೊಡಲಾಗುತ್ತದೆ. ಬೇರೆ ಬೇರೆ ಗ್ರಾಮಗಳಲ್ಲಿ ಹಬ್ಬವನ್ನಾಚರಿಸುವ ಸಾಂಪ್ರದಾಯಿಕ ವಿಧಾನ ಹಾಗೂ ಹಬ್ಬದ ಆಚರಣೆಯಲ್ಲಿ ವ್ಯತ್ಯಾಸಗಳಿವೆ.

**ಮೈಸೂರು ನಗರದಲ್ಲಿ ಚಾಮುಂಡೇಶ್ವರಿ ಉಪಾಸನೆ:** ಮೈಸೂರು ನಗರವನ್ನು ಏಳು ಮೊಹಲ್ಲಾಗಳೂ ಅಥವಾ ವಾರ್ಡುಗಳಾಗಿ ವಿಭಾಗಿಸಲಾಗಿದೆ. ಎಲ್ಲ ಮೊಹಲ್ಲಾಗಳಲ್ಲಿ ಹಿಂದೂಗಳ ಪ್ರಾಬಲ್ಯವಿದೆ. ಮೈಸೂರು ನಗರದಲ್ಲಿರುವ ಕೋಟೆ ಮೊಹಲ್ಲಾ ಹೊರತುಪಡಿಸಿ ಉಳಿದೆಲ್ಲಾ ಮೊಹಲ್ಲಾಗಳಲ್ಲಿ ಚಾಮುಂಡೇಶ್ವರಿಯೊಬ್ಬಳ ಇಲ್ಲವೇ ಚಾಮುಂಡೇಶ್ವರಿಯೊಡನೆ ಸ್ಥಾನಿಕ ದೇವತೆಯ ಪೂಜೆ ನೆರವೇರಿಸುವ ಪದ್ಧತಿಯಿರುವುದನ್ನು ಗಮನಿಸಬಹುದು. ಎಲ್ಲ ಮೊಹಲ್ಲಾಗಳಲ್ಲಿ ಚಾಮುಂಡೇಶ್ವರಿಯ ಪೂಜೆಯನ್ನು ವಿವಿಧ ವಿಧಾನಗಳಲ್ಲಿ ಮಾಡಲಾಗುತ್ತದೆ. ಚಾಮುಂಡೇಶ್ವರಿಯು ಸ್ತ್ರೀ ದೇವತೆಯಾದ್ದರಿಂದ ಮಂಗಳವಾರ ಹಾಗೂ ಶುಕ್ರವಾರ ಪೂಜಿಸಲಾಗುತ್ತದೆ. ಮೈಸೂರು ನಗರದಲ್ಲಿ ಚಾಮುಂಡೇಶ್ವರಿ ಪೂಜೆಯ ದಿನಾಂಕಗಳು ಪ್ರಥಮವಾಗಿ ಜನರ ಅನುಕೂಲತೆ ಹಾಗೂ ಸ್ಥಳೀಯ ಸಂಪ್ರದಾಯಗಳನ್ನು ಆಧರಿಸಿರುತ್ತದೆ.

**ದೇವಿಯ ಸಾಂಕೇತಿಕ ರೂಪಗಳು:** ಮೈಸೂರು ನಗರದಲ್ಲಿ ಚಾಮುಂಡೇಶ್ವರಿಯನ್ನು ಪೂಜೆಯ ಕಾಲದಲ್ಲಿ ವಿವಿಧ ರೀತಿಯ ಸಂಕೇತಗಳಲ್ಲಿ ಆರಾಧಿಸಲಾಗುವುದು. ಕಲಶಪೂಜೆಯು ಸಾಂಪ್ರದಾಯಿಕವಾಗಿ ಜನಪದ ಪದ್ಧತಿಯಾಗಿದೆ. ಚಾಮುಂಡೇಶ್ವರಿ ದೇವತೆಯನ್ನು ಇಂತಹ ಸಂಕೇತದ ಮುಖಾಂತರವೂ ಪೂಜಿಸಲಾಗುತ್ತದೆ. ಪೂಜಾವಿಧಿಗಾಗಿ ಮಣ್ಣಿನ ಹಾಗೂ ಕಟ್ಟಿಗೆಯ ಮೂರ್ತಿಗಳನ್ನು ಉಪಯೋಗಿಸುತ್ತಾರೆ. ದೇವತೆಯ ವಾರ್ಷಿಕ ಸಮಾರಂಭದ ಅವಧಿಯು ಬೇರೆ ಬೇರೆ ಪ್ರದೇಶದಲ್ಲಿ ಬೇರೆಬೇರೆಯಾಗಿದೆ. ಬಹಳಷ್ಟು ಸ್ಥಳಗಳಲ್ಲಿ ಉತ್ಸವವು 24 ಗಂಟೆಗಳಲ್ಲಿ ಮುಗಿಯುತ್ತದೆ. ಆದರೆ ಕೆಲವು ಕಡೆ ಇದರ ಅವಧಿಯು 25 ಗಂಟೆಗಿಂತ ಹೆಚ್ಚಿಗೆ ವಿಸ್ತರಿಸುತ್ತದೆ. ಕಲಶ ಮುಖ್ಯವಾಗಿ ಚಾಮುಂಡೇಶ್ವರಿಯ ಸಂಕೇತ, ಕಲಶ ಪೂಜೆಯನ್ನು ಚಾಮುಂಡೇಶ್ವರಿ ಬೆಟ್ಟದ ಅಡಿಯಲ್ಲಿ ನೆರವೇರಿಸುವುದು

ಸಂಪ್ರದಾಯವಾಗಿದೆ. ದೇವಸ್ಥಾನದಿಂದ ತೀರ್ಥವನ್ನು ತರಲಾಗುತ್ತದೆ. ನಂತರ ಕಲಶವನ್ನು ಋತುಮತಿಯಾಗದ ಅವಿವಾಹಿತ ಹುಡುಗಿಯು ತಲೆಯ ಮೇಲೆ ಹೊತ್ತುಕೊಂಡು ಒಯ್ಯುತ್ತಾಳೆ. ಎರಡನೆಯ ಮಹತ್ವದ ಅಂಶವೆಂದರೆ ಕೆಲವು ಪ್ರದೇಶಗಳಲ್ಲಿ ನಡೆಯುವ ಪಶುಬಲಿ. ದೇವತೆ ಎದುರಿಗೆ ಕನಿಷ್ಟ ಒಂದು ಪಶುವನ್ನಾದರೂ ಬಲಿಕೊಡುತ್ತಾರೆ. ಇದಕ್ಕೆ ಧೂಳುಮರಿ ಎಂದು ಹೆಸರು. ಪಶುಬಲಿ ಕ್ರಿಯಾವಿಧಿ ನಡೆಯುವಾಗ ಬ್ರಾಹ್ಮಣರು ಭಾಗವಹಿಸುವುದಿಲ್ಲ. ನಗರದ ಅಸ್ಪೃಶ್ಯ ಜಾತಿಯವರಾದ ಆದಿಕರ್ನಾಟಕ, ಆದಿಜಾಂಬವರು ತಮಟೆ ಭಾರಿಸುವ ಹಾಗೂ ಡಂಗುರ ಸಾರುವ ಕೆಲಸ ಮಾಡುತ್ತಾರೆ. ಕೊನೆಯದಾಗಿ ಪೂಜೆ ಮುಗಿದ ನಂತರ ದೇವಿಯ ವಿಸರ್ಜನೆ ಸಮಾರಂಭವನ್ನು ಏರ್ಪಡಿಸುತ್ತಾರೆ.

ಶ್ರೀಸಾಮಾನ್ಯ ಹಾಗೂ ಪಂಡಿತ ವರ್ಗದವರು ಚಾಮುಂಡೇಶ್ವರಿಯ ಬಗ್ಗೆ ತಳೆದ ಗ್ರಹಿಕೆಯ ಭೇದ ಗಮನಾರ್ಹವಾಗಿದೆ. ಬ್ರಾಹ್ಮಣೇತರರಿಂದ ಕೂಡಿದ ಶ್ರೀಸಾಮಾನ್ಯರ ವರ್ಗವು ಮೈಸೂರು ನಗರ ಹಾಗೂ ಅದರ ನೆರೆಹೊರೆ ಪ್ರದೇಶದ ಅಧಿದೇವತೆಯೆಂದರೆ ಚಾಮುಂಡೇಶ್ವರಿಯೆಂದು ಭಾವಿಸುತ್ತಾರೆ. ಆದರೆ ಹೆಚ್ಚಾಗಿ ಬ್ರಾಹ್ಮಣರಿರುವ ಪಂಡಿತ ವರ್ಗ ಚಾಮುಂಡೇಶ್ವರಿಯನ್ನು ಸರ್ವಶಕ್ತ ಭಗವಂತನ ಸ್ತ್ರೀ ಸ್ವರೂಪವೆಂದು ಭಾವಿಸುತ್ತಾರೆ. ಶ್ರೀ ಸಾಮಾನ್ಯರು ಚಾಮುಂಡೇಶ್ವರಿಯನ್ನು ನಗರ ಹಾಗೂ ನೆರೆ ಪ್ರದೇಶದ ದೃಷ್ಟಿಕೋನದಿಂದ ನೋಡುತ್ತಾರೆ. ಅವರ ವಿಚಾರಗಳು ಆ ಪ್ರದೇಶದ ಬೇರೆ ದೇವತೆಗಳ ನಂಬಿಕೆಗಳೊಂದಿಗೆ ಹೆಚ್ಚು ಹೋಲಿಕೆಯುಳ್ಳದ್ದಾಗಿದೆ. ತದ್ವಿರುದ್ಧವಾಗಿ ಪಂಡಿತ ವರ್ಗವು ಚಾಮುಂಡೇಶ್ವರಿಯನ್ನು ವೈದಿಕ ಸಂಸ್ಕೃತಿಯ ದೃಷ್ಟಿಕೋನಗಳನ್ನು ಕಟ್ಟುನಿಟ್ಟಾಗಿ ಪ್ರತ್ಯೇಕಿಸುವಂತಿಲ್ಲ. ಇದಕ್ಕೆ ವಿರುದ್ಧವಾಗಿ ಈ ವಿಚಾರಗಳನ್ನು ಅರ್ಥೈಸುವ ರೀತಿ ಎರಡೂ ಗುಂಪುಗಳ ಸಾಮಾನ್ಯ ಲಕ್ಷಣವಾಗಿದೆ.

**ಕೊನೆ ಟಿಪ್ಪಣಿಗಳು:**

1. ರಾಮಕೃಷ್ಣರಾಯ, ಆ್ಯನಲ್ಸ್ ಆಫ್ ಮೈಸೂರ್, ಭಾಗ–1, ಪು. 6–7.
2. ಬಿ. ಬಿ. ಗೋಸ್ವಾಮಿ ಮತ್ತು ಎಸ್. ಜಿ. ಮೊರಬ, ಮೈಸೂರು ಚಾಮುಂಡೇಶ್ವರಿ ದೇವಸ್ಥಾನ: ಒಂದು ಸಾಮಾಜಿಕ ಅಧ್ಯಯನ, ಪು. 8.